ಎಂಬ ವಾದ ಇಲ್ಲಿ ಬರಬಹುದು. ಆದರೆ ಪುರುಷರ ಕಾಸ್ಮೆಟಿಕ್ ಸರ್ಜರಿಗಿರುವ ಉದ್ದೇಶ ತನ್ನ ಮಾಚೋತನವನ್ನು ಮೆರೆಸುವುದಕ್ಕೆ ಹೊರತು 'ನಾರ್ಮಲ್' ಆಗಿರುವುದಕ್ಕಲ್ಲ. ಸೌಂದರ್ಯಪಾಲನೆ, ಪೋಷಣೆಗೆ ಗಂಡಸು ಕಸರತ್ತು ಮಾಡಿಸಿಕೊಳ್ಳುತ್ತಾನೆ, ಕೂದಲು ಕಸಿ ಮಾಡಿಸಿಕೊಳ್ಳುತ್ತಾನೆ, ಹೆಚ್ಚೆಂದರೆ ಬೋಟೆಕ್ಸ್. ಮೈಕೆಲ್ ಜ್ಯಾಕ್ಸನ್ ಅಂತಹ ವ್ಯಕ್ತಿ ತನ್ನ ಶಸ್ತ್ರಚಿಕಿತ್ಸೆಗಳನ್ನು ಮಾಡಿಸಿಕೊಂಡಿದ್ದು ಆತನಿಗಿದ್ದ ತೀವ್ರ ಮಾನಸಿಕ ಅಸ್ವಸ್ಥತೆಯಿಂದ.)

## ಏಕರೂಪದ ಸೌಂದರ್ಯ

ಈ ಶಸ್ತ್ರಚಿಕಿತ್ಸೆಗಳು ವಿಪುಲವಾಗಿ ಲಭ್ಯವಾಗುತ್ತಾ ಹೋದಾಗ ಸೌಂದರ್ಯ ತನ್ನ ಬಹುತ್ವ, ವೈವಿಧ್ಯತೆಯನ್ನು ಕಳೆದುಕೊಂಡು ರೆಡಿಮೇಡ್ ಬಟ್ಟೆಯಂತೆ ಎಲ್ಲರಿಗೂ ಒಂದೇ ಪ್ರಮಾಣದಲ್ಲಿ ದೊರಕಲಾರಂಭಿಸಿತು. ಸಿಂಡಿ ಕ್ರಾಫರ್ಡ್ ಅಥವಾ ಐಶ್ವರ್ಯಾ ರೈ ಅಂತಹವರ ಮೈಮಾಟ ನಿನಗೂ ಸಿಗುತ್ತದೆ ಎಂದು ಪ್ಲಾಸ್ಟಿಕ್ ಸರ್ಜನ್‌ಗಳು ಪ್ರಚಾರ ಮಾಡಿದಾಗ ಮತ್ತು ಇದೇ ಮೈಮಾಟ ಸೌಂದರ್ಯ ಸ್ಪರ್ಧೆಗಳಲ್ಲಿ ಮತ್ತು ಫಿಲ್ಮ್ ಫೇರ್, ಆಸ್ಕರ್ ಮೇಳಗಳಲ್ಲಿ ಪ್ರದರ್ಶಿತವಾದಾಗ ಸೌಂದರ್ಯದಲ್ಲಿಯೂ 'ಸಮಾನತೆ' ಸಿಗತೊಡಗಿತು.

ಸೌಂದರ್ಯ ಎಲ್ಲರಿಗೂ ಸಮಾನವಾಗಿ ಸಿಗುವ ಪ್ರಕ್ರಿಯೆಯಲ್ಲಿ ಬಹಳಷ್ಟು ಮಂದಿ ತಮ್ಮ ಜನಾಂಗ, ವಯಸ್ಸು, ದೇಹದ ಆಕಾರ, ಬಣ್ಣ, ಉಬ್ಬು, ತಗ್ಗು, ಸುಕ್ಕುಗಳಿಂದ ವಿವರಿಸಲಾಗುವ ತಮ್ಮ ಅಸ್ಮಿತೆಯನ್ನು ಕಳಕೊಂಡು 'ಏಕರೂಪಿ'ಗಳಾಗುತ್ತಾರೆ ಎಂದು ಸ್ತ್ರೀವಾದಿಗಳು ವಾದಿಸತೊಡಗಿದರು. 'Reconstructing Women's Identities: The Phenomenon of Cosmetic Surgery in the United States' ಎಂಬ ಪ್ಲಾಸ್ಟಿಕ್ ಸರ್ಜರಿಯ ಸ್ತ್ರೀವಾದಿ ಆಯಾಮಗಳನ್ನು ಶೋಧಿಸುವ ಪುಸ್ತಕದಲ್ಲಿ Cara L. Okopny ಅವರು ಕಾಸ್ಮೆಟಿಕ್ ಸರ್ಜರಿಯನ್ನು ನಮ್ಮ ದೇಹವನ್ನು ಆಕ್ರಮಿಸುವ ವಸಾಹತುಶಾಹಿ ಕ್ರಿಯೆ ಎಂದು ವಿವರಿಸುತ್ತಾರೆ. ಕಾಸ್ಮೆಟಿಕ್ ಸರ್ಜರಿ 'ಸಹಜತೆ' ಎಂಬುದರ ವಿವರಣೆಯನ್ನೇ ಬದಲು ಮಾಡಿ ಇಂಥ ಶಸ್ತ್ರಚಿಕಿತ್ಸೆಗೆ ಒಳಗಾದವರ ಸೌಂದರ್ಯವೇ ನಿಜವಾದ ಸೌಂದರ್ಯ ಎಂದು ಕಲ್ಪನೆಯನ್ನು ಬಿತ್ತುತ್ತದೆ. ತೆಳ್ಳಗೆ, ಬೆಳ್ಳಗೆ, ಬಳುಕುವ ಸೊಂಟ, ಕುಂಭ ಕುಚ, ಕುಂಭ ನಿತಂಬ ಇತರೆ ಇತರೆ ವಿವರಣೆಗೆ ಸಿಗುವ ಒಂದು ಪ್ರಬಲ ಜನಾಂಗದ, ಪ್ರಬಲ ವರ್ಗದ, ಪ್ರಬಲ ಸಂಸ್ಕೃತಿಯ ಮೈಮಾಟ, ಬಣ್ಣ, ಮತ್ತು ದೇಹದ ಇತರೆ ಲಕ್ಷಣಗಳನ್ನು ಮಾತ್ರ ಸೌಂದರ್ಯವೆಂದು ಕರೆದು ಈ 'ಹೊಸ ಸಹಜತೆ'ಯ ಆವರಣದಲ್ಲಿ ಇಲ್ಲದವರು ಸುಂದರಿಯರಲ್ಲ ಎಂಬ ಅನ್ಯಭಾವವನ್ನು ಬೆಳೆಸುತ್ತದೆ. ವಸಾಹತುಶಾಹಿ ಶಕ್ತಿಗಳು (ಸೌಂದರ್ಯವೆಂದರೆ ಏನು ಎಂಬ ಮಿಥ್ಯಾವಾದವನ್ನು ಬೆಳೆಸುವ ಜಾಹೀರಾತು ಕಂಪೆನಿಗಳು, ಫ್ಯಾಷನ್ ಪತ್ರಿಕೆಗಳು, ಸೌಂದರ್ಯ ಸ್ಪರ್ಧೆಗಳು, ಇತ್ಯಾದಿ) ಇತರೆ ದುರ್ಬಲ ಶಕ್ತಿಗಳನ್ನು (ನಮ್ಮ ದೇಹ) ಆಕ್ರಮಿಸಿ ಅದನ್ನು ಬದಲಿಸಿ ಅವರ 'ಸಹಜ ಸೌಂದರ್ಯ'ದ ಏಕರೂಪಿ ವಿವರಣೆಯೊಳಗೆ ಎಲ್ಲರೂ ಸೇರುವ ಒಂದು ಅಪಾಯಕಾರಿ ಸನ್ನಿವೇಶವನ್ನು ಸೃಷ್ಟಿಸಿದ್ದಾರೆ ಎಂದು ಕ್ಯಾರಾ ವಾದಿಸುತ್ತಾರೆ.

## ಕಾಯ ಮೀಮಾಂಸೆ

ಬೊಜ್ಜು ಕರಗಿಸುವ ಶಸ್ತ್ರಚಿಕಿತ್ಸೆಗಳನ್ನು ಕಾಸ್ಮೆಟಿಕ್ ಸರ್ಜರಿ ಎಂಬ ಪ್ರಕಾರದಲ್ಲಿ ಸೇರಿಸಲಾಗದಿದ್ದರೂ ತೆಳ್ಳಗಿರುವುದಕ್ಕೂ ಸೌಂದರ್ಯಕ್ಕೂ ಹಾಗೂ ದಪ್ಪಗಿರುವುದಕ್ಕೂ ಕುರೂಪಕ್ಕೂ ಅನಾದಿಕಾಲದಿಂದಲೂ ಕವಿಗಳಿಂದ ಹಿಡಿದು, ಸಂಸ್ಕೃತಿಕಥನಕಾರರ ತನಕ ಎಲ್ಲರೂ ಸಂಬಂಧವನ್ನು ಕಲ್ಪಿಸಿದ್ದಾರೆ. ನಮ್ಮ ಸಮಕಾಲೀನ ಸಮಾಜದಲ್ಲಿ ಕೂಡ ತೂಕ ಸೌಂದರ್ಯದ ಮಾಪಕವಾಗಿದೆ. ಕತೆ, ಕಾದಂಬರಿ, ಸಿನಿಮಾ, ಸೌಂದರ್ಯ ಸ್ಪರ್ಧೆಗಳು, ಸಾಮಾಜಿಕ ಜಾಲತಾಣಗಳ ಪ್ರೊಫೈಲ್ ಚಿತ್ರಗಳು, ಪಾರ್ಟಿಗಳು – ಎಲ್ಲ ಕಡೆ ತೆಳ್ಳಗಿರುವುದು, ಮೈ ಹುರಿಗೊಳಿಸಿಕೊಳ್ಳುವುದು ಆರೋಗ್ಯಕ್ಕಿಂತ ಸೌಂದರ್ಯದ ಗುರುತಾಗಿದೆ. ಹಾಗಾಗಿ ದೇಹದ ತೂಕ ಬೊಜ್ಜು ಎನ್ನುವ ವಿವರಣೆಯಡಿಯಲ್ಲಿ ಬರದಿದ್ದರೂ ಮೈಕೈ ತುಂಬಿಕೊಂಡಿರುವುದು ಅವಲಕ್ಷಣ, ಕುರೂಪ ಎಂಬ ಸಾಮಾಜಿಕ ಸ್ಟಿಗ್ಮಾ ಇರುವುದರಿಂದ ತೂಕ ಇಳಿಸಿಕೊಳ್ಳಲು ಹರಸಾಹಸ ಮಾಡುವುದಲ್ಲದೆ, ಕೆಲವು ಅಪಾಯಕಾರಿಯಲ್ಲದಿದ್ದರೂ ಅನವಶ್ಯಕವಾದ, ಫಲನೀಡದ, ಅಡ್ಡಪರಿಣಾಮ, ದುಷ್ಪರಿಣಾಮ ಬೀರುವ ಔಷಧಿಗಳು, ಶಸ್ತ್ರಚಿಕಿತ್ಸೆಗಳಿಗೆ ತಮ್ಮನ್ನು ಒಡ್ಡಿಕೊಳ್ಳುವುದನ್ನು ನಾವು ಈ ದಿನಗಳಲ್ಲಿ ಬಹುವಾಗಿ ನೋಡುತ್ತೇವೆ.

ಕೇವಲ ಹತ್ತು ವರ್ಷಗಳ ಹಿಂದೆ ಅಮೆರಿಕದಾದ್ಯಂತ ಬೊಜ್ಜಿಳಿಸುವ ಶಸ್ತ್ರಚಿಕಿತ್ಸಾಕೇಂದ್ರಗಳು ತಮ್ಮ ಜಾಹೀರಾತುಗಳಲ್ಲಿ – 'ನಿಮ್ಮ ಮೈಮಾಟವನ್ನು ಕೊಳಚೆಯ ಕೋಳಿಗಳಿಂದ ಸುಂದರ ಸರೋವರದ ಹಂಸಗಳನ್ನಾಗಿ ಮಾರ್ಪಡಿಸುತ್ತೇವೆ' ಎಂದು



**ನಮ್ಮ ಮನಸ್ಸಿನ ಈ ಸುಪ್ತ ರಕ್ಷಣಾ ವಿಧಾನ ನಮ್ಮನ್ನು ಹೆಚ್ಚು ಹೆಚ್ಚು ತಿನ್ನಲು ಪ್ರಚೋದಿಸುತ್ತದೆ. ಹಾಗಾಗಿ ಅತಿಯಾಗಿ ತಿನ್ನುವುದು ಕೇವಲ ಚಟವಲ್ಲ, ಅದೊಂದು ಮಾನಸಿಕ ಕಾಯಿಲೆ.**